1. **ಹಳ್ಳದಕೇರಿ:** 21 ಮನೆ, 203 ನಿವೇಶನಗಳನ್ನು ಹಂಚಿಕೆ ಮಾಡಲಾಗಿದೆ. 29 ನಿವೇಶನಗಳ ಹಂಚಿಕೆ ಬಗ್ಗೆ ತಕರಾರು ನ್ಯಾಯಾಲಯದಲ್ಲಿ ಬಾಕಿಯಿರುತ್ತದೆ. 49 ಮೂಲೆ ನಿವೇಶನ ಮತ್ತು 04 ಮನೆಗಳು ವಿಲೇವಾರಿಗೆ ಬಾಕಿಯಿರುತ್ತವೆ.

2. **ಚಿಟ್ಟಾ:** ವಿವಿಧ ವರ್ಗದ 1659 ನಿವೇಶನಗಳನ್ನು ಹಾಗೂ 48 ಮನೆಗಳನ್ನು ನಿರ್ಮಿಸಲಾಗುತ್ತಿದೆ. ನಿರ್ಮಿಸಿದ ನಂತರ ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

3. **ಗುನ್ನಳ್ಳಿ:** ವಿವಿಧ ವರ್ಗದ 711 ನಿವೇಶನಗಳನ್ನು ಹಾಗೂ 17 ಮನೆಗಳನ್ನು ನಿರ್ಮಿಸುವ ಕಾಮಗಾರಿಯು ಪ್ರಗತಿಯಲ್ಲಿದೆ, ನಿರ್ಮಿಸಿದ ನಂತರ ಅವುಗಳನ್ನು ಸಾರ್ವಜನಿಕರಿಗೆ ಹಂಚಿಕೆ ಮಾಡಲಾಗುವುದು.

4. **ಬಿರಾದ್:** ವಸತಿ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಬೇಕಾಗಿದೆ.

ಪ್ರವಾಸಿ ಸ್ಥಳಗಳ ಅಭಿವೃದ್ಧಿ ಬಗ್ಗೆ

118 (187) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ): ಮಾನ್ಯ ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯಲ್ಲಿ ಇರುವ ಪ್ರವಾಸಿ ಸ್ಥಳಗಳು ಯಾವುವು; (ಪೂರ್ಣ ವಿವರಗಳನ್ನು ಮತಕ್ಷೇತ್ರವಾರು ಅಂಕಿ ಅಂಶಗಳಲ್ಲಿ ಒದಗಿಸುವುದು;

ಆ) ಈ ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಬರುವ ಪ್ರವಾಸಿಗರಿಗೆ ಜಿಲ್ಲೆಯಲ್ಲಿ ಯಾವ ಯಾವ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲಾಗಿದೆ;

ಇ) ಕಳೆದ ಎರಡೂವರೆ ವರ್ಷಗಳ ಅವಧಿಯಲ್ಲಿ ಬೀದರ್ ಜಿಲ್ಲೆಯಲ್ಲಿ ಪ್ರವಾಸೋದ್ಯಮವನ್ನು ಉತ್ತೇಜಿಸಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ; ಮತ್ತು ಇದಕ್ಕಾಗಿ ಈ ಅವಧಿಯಲ್ಲಿ ವೆಚ್ಚ ಮಾಡಲಾದ ಹಣವೆಷ್ಟು; (ಪೂರ್ಣ ವಿವರಗಳಗಳನ್ನು ಮತಕ್ಷೇತ್ರವಾರು ಅಂಕಿ-ಅಂಶಗಳಲ್ಲಿ ಒದಗಿಸುವುದು)?

ಶ್ರೀ ಜಿ. ಜನಾರ್ದನ ರೆಡ್ಡಿ (ಪ್ರವಾಸೋದ್ಯಮ ಮತ್ತು ಮೂಲಭೂತ ಸೌಕರ್ಯಗಳ ಅಭಿವೃದ್ಧಿ ಹಾಗೂ ಯುವಜನ ಸೇವೆ ಸಚಿವರು):

ಅ) ಬೀದರ್ ಜಿಲ್ಲೆಯಲ್ಲಿ ಗುರುತಿಸಲಾಗಿರುವ ಪ್ರವಾಸಿ ಸ್ಥಳಗಳು:

1. **ಬೀದರ್ ಮತಕ್ಷೇತ್ರ:** ಬೀದರ್ ನಗರ ಹಾಗೂ ಸುತ್ತಮುತ್ತಲಿನ ಪ್ರವಾಸಿ ಆಕರ್ಷಣೆಗಳು
2. **ಹುಮ್ನಾಬಾದ್ ಮತಕ್ಷೇತ್ರ:** ಜಲಸಾಂಗ್ವಿ, ಹುಮ್ನಾಬಾದ್
3. **ಬಸವಕಲ್ಯಾಣ ಮತಕ್ಷೇತ್ರ:** ಬಸವಕಲ್ಯಾಣ, ನಾರಾಯಣಪುರ
4. **ಭಾಲ್ಕಿ ಮತಕ್ಷೇತ್ರ:** ಕಾರಂಜಾ ಜಲಾಶಯ

ಆ. 1. ಗುರ್–ತಾ–ಗದ್ದಿ ತ್ರಿಶತಮಾನೋತ್ಸವದ ಅಂಗವಾಗಿ ಬೀದರ್ ನಗರದ ಪ್ರವಾಸಿ ತಾಣಗಳ ಅಭಿವೃದ್ಧಿ ಹಾಗೂ ಆಂತರಿಕ ರಸ್ತೆಗಳ ಅಭಿವೃದ್ಧಿ, ವಿಮಾನ ನಿಲ್ದಾಣದ ಸಂಪರ್ಕ ರಸ್ತೆ ಅಭಿವೃದ್ಧಿ ಹಾಗೂ ಇತರ ಸೌಲಭ್ಯಗಳನ್ನು ಒದಗಿಸಲು ಕೈಗೊಳ್ಳಲಾಗುತ್ತಿರುವ ಯೋಜನೆಗಳನ್ನು ಜಿಲ್ಲಾಡಳಿತದ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

2. ಬಸವಕಲ್ಯಾಣದಲ್ಲಿ ಸ್ವಾಗತಕಾರರಿಂದ ಕೂಡಿದ ಪ್ರವಾಸಿ ಕಛೇರಿಯನ್ನು ನಿರ್ವಹಿಸಲಾಗುತ್ತಿದೆ.
3. ಸಸ್ತಾಪುರದಲ್ಲಿ ಯಾತ್ರಿನಿವಾಸ ನಿರ್ಮಿಸಿ ಖಾಸಗಿಯವರಿಗೆ ನಿರ್ವಹಣೆಗಾಗಿ ವಹಿಸಿಕೊಡಲಾಗಿದೆ.
4. ಜಿಲ್ಲೆಯಾದ್ಯಂತ ಪ್ರವಾಸಿ ಮಾರ್ಗಸೂಚಿ ಫಲಕಗಳನ್ನು ಅಳವಡಿಸಲಾಗಿದೆ.
5. ಬೀದರ್ ಜಿಲ್ಲೆಯ ಪ್ರವಾಸಿ ಸ್ಥಳಗಳ ಬಗ್ಗೆ ಮಾಹಿತಿ ಮಡಿಕೆಯನ್ನು ಮುದ್ರಿಸಿ ಪ್ರವಾಸಿಗರಿಗೆ ಉಚಿತವಾಗಿ ವಿತರಿಸಲಾಗುತ್ತಿದೆ.
6. ಬಸವಕಲ್ಯಾಣದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗಿದೆ.
7. ಗುರುನಾನಕ್ ಝರ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗಿದೆ.
8. ಜನವಾಡ, ಮಾಹಿಭಾಗ್ ಗುರುದ್ವಾರದ ಬಳಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯ ನಿರ್ಮಿಸಲಾಗಿದೆ.

ಇ) ಬೀದರ್ ನಗರದಲ್ಲಿ ಪ್ರವಾಸಿ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಯೋಜನಾ ಆಯೋಗವು ಹೆಚ್ಚುವರಿ ಕೇಂದ್ರ (ACA) ಅನುದಾನದಡಿ ರೂ. 136.00 ಕೋಟಿಗಳಿಗೆ ಅನುಮೋದನೆ ನೀಡಿ, ಕೇಂದ್ರದ ಕಂತಾಗಿ ರೂ. 40.80 ಕೋಟಿ ರೂ.ಗಳನ್ನು ಬಿಡುಗಡೆ ಮಾಡಿರುತ್ತದೆ. ಹೀಗಾಗಿ ಬೀದರ್ ನಗರದಲ್ಲಿ ಮೂಲಭೂತ ಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು 2008–09ನೇ

ಸಾಲಿನಲ್ಲಿ ರೂ. 35.00 ಕೋಟಿಗಳನ್ನು 2009–10ನೇ ಸಾಲಿನಲ್ಲಿ ರೂ. 40.00 ಕೋಟಿಗಳನ್ನು ಹಾಗೂ 2010–11ನೇ ಸಾಲಿನಲ್ಲಿ ರೂ. 10.21 ಕೋಟಿಗಳನ್ನು ರಾಜ್ಯ ಸರ್ಕಾರದ ಅನುದಾನದಿಂದ ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಬಿಡುಗಡೆ ಮಾಡಲಾಗಿದೆ. ಬಹುತೇಕ ಕಾಮಗಾರಿಗಳು ಪೂರ್ಣಗೊಂಡಿರುತ್ತದೆ.

ಬೀದರ್ ಕೋಟೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯಗಳನ್ನು ಕಲ್ಪಿಸಲು ಕೇಂದ್ರ ಸರ್ಕಾರವು ರೂ. 318.17 ಲಕ್ಷಗಳ ಅಂದಾಜು ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ಮೊದಲ ಕಂತಾಗಿ ರೂ. 40.00 ಲಕ್ಷಗಳನ್ನು ಜಿಲ್ಲಾಧಿಕಾರಿಗಳು, ಬೀದರ್‌ರವರಿಗೆ ಬಿಡುಗಡೆ ಮಾಡಲಾಗಿದೆ. ಜಿಲ್ಲಾಧಿಕಾರಿಗಳ ಮೂಲಕ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ರೂ. 192.00 ಲಕ್ಷಗಳ ಅಂದಾಜಿನಲ್ಲಿ ಬೀದರ್ ಕೋಟೆ ಪ್ರದೇಶದಲ್ಲಿ ಧ್ವನಿ ಮತ್ತು ಬೆಳಕು ಯೋಜನೆ ಅಳವಡಿಸಲು ಕ್ರಮ ವಹಿಸಲಾಗಿದ್ದು ಈ ಬಾಬ್ತು ಇಲ್ಲಿಯವರೆಗೆ ರೂ. 100.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ ಒಪ್ಪಿಗೆಗೆ ಕಾಯಲಾಗುತ್ತಿದೆ.

ಬೀದರ್ ಜಿಲ್ಲೆಯ ಚೌಕಂಡಿ ಹಾಗೂ ಅಸ್ಟೂರ್ ಟೂಂಬ್ ಪ್ರದೇಶಗಳನ್ನು ಪ್ರವಾಸಿ ತಾಣಗಳನ್ನಾಗಿ ಅಭಿವೃದ್ಧಿಪಡಿಸಲು ಕೇಂದ್ರ ಸರ್ಕಾರವು ರೂ. 318.27 ಲಕ್ಷಗಳ ಅಂದಾಜು ಯೋಜನೆಗೆ ಅನುಮೋದನೆ ನೀಡಿರುತ್ತದೆ. ಈ ಸಂಬಂಧ ರೂ. 40.00 ಲಕ್ಷಗಳನ್ನು ಮೊದಲ ಕಂತಾಗಿ ಜಿಲ್ಲಾಧಿಕಾರಿಗಳಿಗೆ ಬಿಡುಗಡೆ ಮಾಡಲಾಗಿದೆ.

ಬೀದರ್ ಜಿಲ್ಲೆಯ ವಿಲಾಸಪುರ ಟ್ಯಾಂಕ್ ಪ್ರದೇಶದಲ್ಲಿ ಜಂಗಲ್ ಲಾಡ್ಜಸ್ ಅಂಡ್ ರೆಸಾರ್ಟ್ ಸಂಸ್ಥೆಯ ಮೂಲಕ ಪರಿಸರ ಪ್ರವಾಸೋದ್ಯಮ ಕೇಂದ್ರವನ್ನು ರೂ. 177.00 ಲಕ್ಷಗಳ ಅಂದಾಜು ವೆಚ್ಚದಲ್ಲಿ ನಿರ್ಮಿಸಲಾಗಿರುತ್ತದೆ.

ಮಹಿಭಾಗ ಜನವಾಡ ಮತ್ತು ನಾನಕಝರಾಗಳ ಬಳಿ ತಲಾ ರೂ. 12.50 ಲಕ್ಷಗಳ ವೆಚ್ಚದಲ್ಲಿ ಶೌಚಾಲಯ ಮತ್ತು ಕುಡಿಯುವ ನೀರಿನ ಸೌಲಭ್ಯಗಳನ್ನು ನಿರ್ಮಿಸಲಾಗಿದೆ.

ಈ ಕಾಮಗಾರಿಗಳಿಗೆ ಒಟ್ಟು ರೂ. 8903.00 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಈ ಅವಧಿಯಲ್ಲಿ ಉಳಿದ ಕ್ಷೇತ್ರಗಳಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೊಂಡಿರುವುದಿಲ್ಲ.